## ನಕ್ಕುಬಿಡಿ





ಗುಂಡ: ನಾಳೆ ನಾವು ಊಟಿಗೆ ಹೋಗ್ತಾ ಇದೀವಿ. ನಿನಗೆ ಹನಿಮೂನ್ ಅಂದ್ರೆ ಇಷ್ಟಾನಾ?
ಪ್ರೇಯಸಿ: ಅಯ್ಯೋ ಇಲ್ಲಾಪ್ಪ. ಜಾಮೂನ್ ಅಂದ್ರೆ ಮಾತ್ರ ನಂಗೆ ತುಂಬಾ ಇಷ್ಟ

★★★

ಗುಂಡ: ಏಯ್, ಇದೇನೇ ಇದು ಇವತ್ತು ಪಲ್ಯದಲ್ಲಿ ಒಂದು, ಎರಡು ರೂಪಾಯಿ ನಾಣ್ಯ ಹಾಕಿದ್ದೀಯ?
ಹೆಂಡತಿ: ಪ್ರತಿದಿನ ನೀವೇ ಹೇಳ್ತಾ ಇದ್ರಲ್ಲ. ಅಡುಗೆಯಲ್ಲಿ ಸ್ವಲ್ಪ ಚೇಂಜ್ ಇರಲಿ ಅಂತ ಅದಕ್ಕೆ ಹಾಕ್ದೆ

ಗೆಳೆಯ: ಲೋ ಗುಂಡ ವಿಷಯ ಗೊತ್ತಾಯ್ತಾ? ಹಿಂದಿನ ರಸ್ತೆಯ ಗೋಪಿಯ ಹೆಂಡತಿಗೆ ಸಡನ್ನಾಗಿ ಮಾತು ನಿಂತು ಹೋಗಿದೆಯಂತೆ
ಗುಂಡ: ಗೊತ್ತಾಯಿತಪ್ಪ. ಅದಕ್ಕೆ ನನ್ನ ಹೆಂಡತಿಯನ್ನು ಆಕೆಯ ಹತ್ತಿರ ಕಳುಹಿಸಿದ್ದೇನೆ
ಗೆಳೆಯ: ಅಯ್ಯೋ ಯಾಕೆ?
ಗುಂಡ: ಏನಿಲ್ಲ. ಅದೇನಾದರು ಅಂಟು ರೋಗವಾದರೆ ಒಳ್ಳೆಯದು ಅಂತ

(ಸಂಗ್ರಹ) **ಎಂ.ಕೆ. ಮಂಜುನಾಥ್,**
ಸುಂಕದಕಟ್ಟೆ

ಬಸ್ಯಾ: ವೋಟ್ ಹಾಕಕ 18 ವರ್ಷ ಓಕೆ. ಆದರಾ ಮದ್ವೆ ಆಗಾಕ 21ವರ್ಷ ಯಾಕೆ?
ಸಂತ್ಯಾ: ಸರ್ಕಾರಕ್ಕೂ ಗೊತ್ತಾಗೇತಿ ಲೇ. ದೇಶ ಆಳುವುದು ಸುಲಭ, ಆದ್ರ ಹೆಂಡತಿ ಜತೆ ಹೊಂದಿಕೊಂಡು ಹೋಗೋದು ಕಷ್ಟ ಅಂತ!

★★★

ರಾಜು: ನಂಗೆ ಆತ್ಮವಿಶ್ವಾಸ ಬೇಕು. ಜಗತ್ತನ್ನೇ ಎದುರಿಸೋ ಧೈರ್ಯ ಬೇಕು. ಬದುಕೆಂಬ ಗೂಳಿಯ ಕೋಡು ಹಿಡಿದು ಬಗ್ಗಿಸಿ ಗೆಲ್ಲೋ ತಾಕತ್ತು ಬೇಕು. ಬ್ರಹ್ಮಾಂಡವೇ ನನ್ನದಂತ ಎದ್ದು ನಿಲ್ಲೋ ಶಕ್ತಿ ಬೇಕು.
ಅಂಗಡಿಯವ: 'ಲೋ ರಾಜು, ಇವರಿಗೆ ಒಂದ್ ಕ್ವಾರ್ಟ್ರ್ ಓಲ್ಡ್ ಮಾಂಕು, ಒಂದ್ ಕಡ್ಲೆ ಬೀಜದ್ ಪ್ಯಾಕೆಟ್ ಕೊಡಪ್ಪ!

★★★

ಅಜ್ಜಿ: ಮಸಿ ನೀರಲೆ ತೊಳೆದ್ರ ಹೋಗ್ತಾದೇನಪ್ಪಾ?
ಚುನಾವಣಾ ಅಧಿಕಾರಿ: ಇಲ್ಲಬೆ
ಅಜ್ಜಿ: ಎಣ್ಣೆ ಹಚ್ಚಿದ್ರಾ?
ಚುನಾವಣಾ ಅಧಿಕಾರಿ: ಇಲ್ಲಾ
ಅಜ್ಜಿ: ಮತ್ತ ಸಾಬಣ ಹಚ್ಚಿದ್ರಾ?
ಚುನಾವಣಾ ಅಧಿಕಾರಿ: ಇಲ್ಲಬೆ, ಎನ್ನ ಹಚ್ಚಿದ್ರೂ ಲಗೂ ಹೋಗೋದಿಲ್ಲಾ
ಅಜ್ಜಿ: ಹೋಗಲಿಕ್ಕೆ ಎಷ್ಟ್ ದಿನಾ ಬೇಕಪಾ?
ಚುನಾವಣಾ ಅಧಿಕಾರಿ: 2–3 ತಿಂಗ್ಳು ಬೇಕು
ಅಜ್ಜಿ (ಖುಷಿಲೆ): ಭೇಸ ಆತ ಬಿಡಪಾ, ಕೂದಲಕ್ಕ ಹಚ್ಚಿಲಿಕ್ಕೆ ಸ್ವಲ್ಪ ಕೊಡತಿಯೆನಾ!



ಬಸ್ಯಾ: ಈ ಅಮಿತಾಭ್ ಬಚ್ಚನ್ ಅವ್ರದು ಒಳ್ಳೆ ಕಥೆ ಆಯ್ತಲ್ಲ. ಮೊದ್ಲು ಕಲ್ಯಾಣ್ ಜ್ಯುವೆಲ್ಲರ್ಸ್‌ನಲ್ಲಿ ಒಡವೆ ಖರೀದಿಸೋಕೆ ಹೇಳ್ತಾರೆ. ಆಮೇಲೆ ಮುತ್ತೂಟ್ ಫೈನಾನ್ಸ್‌ನಲ್ಲಿ ಚಿನ್ನದ ಸಾಲ ತೊಗೊಳ್ರಿ ಅಂತಾರೆ.
ಸಂತ್ಯಾ: ಮತ್ತೆ ಸಾಲದ ಟೆನ್ಶನ್ ಜಾಸ್ತಿ ಆದ್ರಾ.
ಬಸ್ಯಾ: ಜೊತೆಗ್ ತಲೆಗೆ ನವರತ್ನ ತೈಲ ಹಚ್ಕೊಂಡು ಟೆನ್ಶನ್‌ಫ್ರೀ ಆಗೋ ಸಲಹೆ ನೀಡ್ತಾರೆ.

(ಸಂಗ್ರಹ) **ವಿಜಯ್‌ಕುಮಾರ್ ಎಚ್. ಕೆ,**
ರಾಯಚೂರು.

